1	2	3	4	5
24.	ಗುಲಬರ್ಗಾ	02	–	02
25.	ಬೀದರ್	12	–	12
26.	ರಾಯಚೂರು	–	–	–
27.	ಕೊಪ್ಪಳ	–	–	–
	ಒಟ್ಟು	384	373	757

ರಾಜ್ಯದಲ್ಲಿ ನದಿ ಹಳ್ಳಗಳಿಗೆ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡುವುದು

3186 (3678) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನದಿ ಹಳ್ಳಗಳಿಗೆ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸಿದೆಯೆ;

ಆ) ಹಾಗಿದ್ದರೆ, ಯಾವ ಯೋಜನೆಯಲ್ಲಿ ಈ ಬ್ಯಾರೇಜ್‌ಗಳನ್ನು ನಿರ್ಮಾನ ಮಾಡಲಾಗುವುದು;

ಇ) ಈ ಬ್ಯಾರೇಜ್‌ಗಳನ್ನು ಎಲ್ಲೆಲ್ಲಿ ನಿರ್ಮಾಣ ಮಾಡಲಾಗುವುದು; ಎಷ್ಟು ನಿರ್ಮಾಣ ಮಾಡಲಾಗುವುದು; ವಿವರ ನೀಡುವುದು; ಜಿಲ್ಲಾವಾರು ವಿವರ ನೀಡುವುದು;

ಈ) ಈ ಬ್ಯಾರೇಜ್‌ಗಳ ನಿರ್ಮಾಣಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗುವುದು;

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹೌದು.

ಆ) ನಮ್ಮೂರ ಬಾಂದಾರ ಯೋಜನೆಯಡಿ ರಾಜ್ಯದ ಎಲ್ಲಾ ನದಿ/ಮುಖ್ಯ ಹಳ್ಳಗಳಿಗೆ ಅಡ್ಡಲಾಗಿ ಬಾಂದಾರಗಳನ್ನು ನಿರ್ಮಿಸುವ ಸಲುವಾಗಿ ಈಗಾಗಲೇ ಸಮೀಕ್ಷೆ ನಡೆಸಿದ್ದು, ಸೂಕ್ತವಾದ ಸ್ಥಳಗಳಲ್ಲಿ ಬಾಂದಾರಗಳನ್ನು ನಿರ್ಮಿಸುವ ಉದ್ದೇಶವಿರುತ್ತದೆ.

ಇ) ಉತ್ತರಗಳು (ಆ) ನಲ್ಲಿರುವಂತೆ.

ಈ) ಸಮೀಕ್ಷೆ ಪೂರ್ಣಗೊಂಡ ನಂತರ ಮಾಹಿತಿ ಲಭ್ಯವಾಗುವುದು.

ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ಬಡ್ತಿಯಲ್ಲಿ ಅನ್ಯಾಯವಾಗಿರುವ ಬಗ್ಗೆ

3187 (3679) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ವೃಂದ ನೇಮಕಾತಿ ಮತ್ತು ಬಡ್ತಿಗೆ ಸಂಬಂಧಿಸಿದಂತೆ ಅನುಸರಿಸುತ್ತಿರುವ ನಿಯಮಗಳೇನು; ವಿವರ ನೀಡುವುದು;

ಆ) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ 1973 ರಿಂದ ಈವರೆಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರಕಟಿಸದೇ ಇರುವುದು ನಿಜವೇ;

ಇ) ಇದರಿಂದ ಉನ್ನತ ಅಧಿಕಾರಿಗಳು ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸದೇ ತಮಗೆ ಬೇಕಾದವರಿಗೆ ಬೇಕಾದ ಹುದ್ದೆಗಳಿಗೆ ಬಡ್ತಿ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ರೀತಿ ಬಡ್ತಿ ಹುದ್ದೆಗಳನ್ನು ಹಣಕ್ಕಾಗಿ ಮಾರಾಟ ಮಾಡುತ್ತಿರುವುದು ನೈಜ ಜ್ಯೇಷ್ಠತೆ ಹೊಂದಿರುವ ನೌಕರರಿಗೆ ಅನ್ಯಾಯವಾಗಿಲ್ಲವೆ;

ಉ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಸರ್ಕಾರವು ಆದೇಶ ಸಂಖ್ಯೆ: ಆರ್‌ಡಿಸಿ 100 ಸಿಎಂಡಿ 74, ದಿನಾಂಕ: 30.10.75 ರಲ್ಲಿ ಮಾರುಕಟ್ಟೆ ಇಲಾಖೆಗೆ ಕಾರ್ಯಕಾರಿ ಆದೇಶದ ಮೂಲಕ ವಿವಿಧ ಪದವೃಂದದ ಹುದ್ದೆಗಳಿಗೆ ನೇಮಕಾತಿ ಬಡ್ತಿ ವಿಧಾನಗಳನ್ನು ನಿಗದಿಪಡಿಸಿದೆ. ಸದರಿ ಆದೇಶದಂತೆ ಮಾರುಕಟ್ಟೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿ/ಸಿಬ್ಬಂದಿಯ ನೇಮಕಾತಿ/ಬಡ್ತಿ ನೀಡುವಿಕೆಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲಾಗಿದೆ.

ಆ) ಹೌದು

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಇಲಾಖೆಯಲ್ಲಿರುವ ವಿವಿಧ ಅಧಿಕಾರಿ/ಸಿಬ್ಬಂದಿ ಸೇವಾ ಸಂಘಗಳೊಂದಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಬಗ್ಗೆ ಸಭೆಗಳನ್ನು ಜರುಗಿಸಿ ವಿಚಾರ ವಿನಿಮಯ ಮಾಡಿಕೊಳ್ಳಲಾಗಿದೆ. ಸದರಿ ಕೃಷಿ ಮಾರಾಟ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲು ಈಗಾಗಲೇ ಹಲವಾರು ಸಭೆಗಳನ್ನು ನಡೆಸಲಾಗಿದೆ. ಸದರಿ ಸಭೆಗೆ ಆರ್ಥಿಕ ಇಲಾಖೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಕಾನೂನು ಇಲಾಖೆಯ ಮತ್ತು ಕೃಷಿ ಮಾರಾಟ ಇಲಾಖೆಯ ಉನ್ನತಾಧಿಕಾರಿಗಳು ಹಾಜರಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಿದಂತೆ ಅವಶ್ಯಕವಾದ ಮಾಹಿತಿಗಳನ್ನು ಪಡೆದು ನಿಯಮಗಳನ್ನು ಪರಿಷ್ಕರಿಸಿ ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರಸ್ತುತ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪರಾಮರ್ಶೆಗೆ ಒಳಪಡಿಸಲು ಕ್ರಮವಿಡಲಾಗುತ್ತಿದ್ದು ಇಷ್ಟರಲ್ಲಿಯೇ ಕರಡು ನಿಯಮಗಳನ್ನು ಪ್ರಕಟಿಸಲಾಗುವುದು.

ರಾಜ್ಯದಲ್ಲಿ ಹಳದಿ ಪಡಿತರ ಚೀಟಿ ವಿತರಣೆ

3188 (3680) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಳದಿ ಪಡಿತರ ಚೀಟಿ ವಿತರಿಸಲು ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು)

ಆ) ಫಲಾನುಭವಿಗಳ ಆಯ್ಕೆಗೆ ಅನುಸರಿಸುತ್ತಿರುವ ಮಾನದಂಡವೇನು?

ಇ) ಈ ಯೋಜನೆಗೆ ಕೇಂದ್ರಸರ್ಕಾರ ಕಳೆದ 3 ವರ್ಷಗಳಲ್ಲಿ ನೀಡಿರುವ ಸಬ್ಸಿಡಿ ಹಣ ಎಷ್ಟು?

ಈ) ಈ ರೀತಿ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಬಡತನರೇಖೆಗಿಂತ ಕೆಳಮಟ್ಟದಲ್ಲಿ ವಾಸಿಸುತ್ತಿರುವ ಶೇಕಡ 50 ರಷ್ಟು ಜನರ ಹೆಸರನ್ನು ಪಟ್ಟಿಯಿಂದ ಬಿಟ್ಟಿರುವುದು ನಿಜವೇ;

ಉ) ಫಲಾನುಭವಿಗಳನ್ನು ಗುರುತಿಸುವಲ್ಲಿ ಅವ್ಯವಹಾರ ನಡೆದಿರುವುದು ನಿಜವೇ;